O.S. ನಂಬರಃ 45/2017
ಡಿ. ಡಬ್ಲ್ಯೂಃ 6

ದಿಃ 12-09-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ 2ನೇ ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

ನಮ್ಮ ತಂದೆಯವರು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ನಾನೂ ಸಹ ಅಂಗೀಕರಿಸುತ್ತೇನೆ ಎಂದರೆ ಸರಿ.

ಪಾಟಿ ಸವಾಲುಃ 1ನೇ ಪ್ರತಿವಾದಿಯ ಪರ ವಕೀಲರಿಂದ ಇರುವುದಿಲ್ಲ.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ನೀವು ಹಾಗೂ ನಿಮ್ಮ ತಂದೆಯವರು ಇಂದಿನವರೆಗೂ ಸಹ ಒಟ್ಟು ಕುಟುಂಬದಲ್ಲಿಯೇ ವಾಸವಿರುತ್ತೀರಿ ಎಂದರೆ ಸರಿ. ನಿಮ್ಮ ಕುಟುಂಬದ ಮ್ಯಾನೇಜರ್ ಯಾರು ಎಂದರೆ ಸಾಕ್ಷಿಯು ನನ್ನ ತಂದೆಯವರು ಎಂದು ನುಡಿಯುತ್ತಾರೆ. ಪ್ರಮಾಣ ಪತ್ರವನ್ನು ಬರೆಯಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರವನ್ನು ಬರೆಸಬೇಕಾದರೆ ನಿಮ್ಮ ತಂದೆಯವರು ಹಾಜರುಪಡಿಸಿದ ದಾಖಲಾತಿಗಳು ನಿಮ್ಮ ತಾಬಾದಲ್ಲಿ ಇದ್ದವಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಹಾಜರುಪಡಿಸಿದ ದಾಖಲಾತಿಗಳನ್ನು

ನೀವು ಇಂದಿನವರೆಗೂ ನೋಡಿ ಓದಿರುತ್ತೀರಾ ಎಂದರೆ ಸಾಕ್ಷಿಯು ಒಂದು ಸಲ ಓದಿರುತ್ತೇನೆ ಎಂದು ನುಡಿಯುತ್ತಾರೆ. ಯಾವಾಗ ಹಾಗೂ ಎಷ್ಟು ವರ್ಷಗಳ ಹಿಂದೆ ಓದಿರುತ್ತೀರಿ ಎಂದರೆ ಸಾಕ್ಷಿಯು ಸಾಧಾರಣ 2015 ರಲ್ಲಿ ಓದಿರಬಹುದು ಎಂದು ನುಡಿಯುತ್ತಾರೆ. ನಿಮ್ಮ ವಿರುದ್ಧ 3 ದಾವೆಗಳು ಚಾಲ್ತಿಯಲ್ಲಿ ಇರುತ್ತವೆ ಎಂದರೆ ಸರಿ. ನಿಮ್ಮ ಹೆಸರಿಗೆ 3 ಕ್ರಯಪತ್ರಗಳು ಆಗಿರುತ್ತವೆ ಎಂದರೆ ಸರಿ. ಅದು ಬೇರೆ ಬೇರೆ ಸಾಲಿನಲ್ಲಿ ಆಗಿರುತ್ತವೆ ಎಂದರೆ ಸರಿ. 2015 ಸಾಲಿನ ಮೊದಲು ಎಷ್ಟು ಕಾಗದ ಪತ್ರಗಳು ಆಗಿರುತ್ತವೆ ಹಾಗೂ 2015ಕ್ಕಿಂತ ನಂತರ ಎಷ್ಟು ಕಾಗದ ಪತ್ರಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ಬಂದು ನಿಮಗೇನಾದರೂ ದಾವಾ ಆಸ್ತಿಯ ಕಬ್ಜೆಯನ್ನು ಕೊಟ್ಟಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವ ದಿನಾಂಕದಂದು ವಾದಿಯರು ದಾವಾ ಆಸ್ತಿಯ ಕಬ್ಜೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 2015 ರಲ್ಲಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರು ಇಂತಹ ತಾರೀಖಿನಂದು ದಾವಾ ಆಸ್ತಿಯ ಕಬ್ಜಾವನ್ನು ವಹಿಸಿಕೊಟ್ಟಿರುತ್ತಾರೆ ಎಂದು ನಿಮ್ಮ ನೋಟೀಸಿನ ಉತ್ತರದಲ್ಲಾಗಲಿ ಅಥವಾ ಪ್ರತಿವಾದ ಪತ್ರದಲ್ಲಾಗಲಿ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

3. ವಾದಿಯರ ಮತ್ತು ನಿಮ್ಮ ಮಧ್ಯ ಒಪ್ಪಂದ ಆಗಿರುತ್ತದೆ ಎಂದು ಹೇಳುವ ಕಾಗದ ಪತ್ರಗಳಲ್ಲಿ ನಿಮ್ಮ ಸಹಿ ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಯಾವ ಊರಿನಲ್ಲಿ ನೀವು ಹೇಳುವ ಒಪ್ಪಂದ ಪತ್ರಕ್ಕೆ ಸಹಿ ಹಾಕಿರುತ್ತೀರಿ ಎಂದರೆ ವಂದಿಗೆಯಲ್ಲಿ

ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಡಿ–5 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ–5ಇ ಎಂದು ಗುರುತಿಸಲಾಯಿತು. ಅದನ್ನು ವಂದಿಗೆಯಲ್ಲಿ ಹಾಕಿರುತ್ತೇನೆ. ವಾದಿಯರು ಎಲ್ಲಿ ಸಹಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಅವರೂ ಸಹ ವಂದಿಗೆಯಲ್ಲಿ ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಎಸ್ ಹೆಚ್ ನಾಯಕ ಇವರ ಮನೆಗೆ ಎಷ್ಟು ಬಾರಿ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಒಂದು ಬಾರಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನೀವು ವಾದಿಯರಿಗೆ ಹಣವನ್ನು ಕೊಟ್ಟಿರುತ್ತೀರಿ ಎಂದು ಹೇಳುವ ದಿನಾಂಕದಂದು ಹಣವನ್ನು ವಿತ್ ಡ್ರಾ ಮಾಡಿದ್ದರ ಬಗ್ಗೆ ದಾಖಲಾತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು 3 ಜನ ವಾದಿಯರನ್ನು ಪ್ರಪ್ರಥಮವಾಗಿ ಎಲ್ಲಿ ಭೇಟಿಯಾಗಿರುತ್ತೀರಿ ಎಂದರೆ ಸಾಕ್ಷಿಯು ಎಸ್ ಹೆಚ್ ನಾಯಕ ಇವರ ಮನೆಯಲ್ಲಿ ಭೇಟಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ಕರಾರು ಪತ್ರ ಆಗಿರುತ್ತದೆ ಎಂದು ಹೇಳುವ ದಿನದಂದು ನಿಮ್ಮ ತಂದೆಯವರು ಇದ್ದರು ಎಂದರೆ ಹೌದು ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ವಂದಿಗೆಯ ಎಸ್ ಹೆಚ್ ನಾಯಕ ಇವರ ಮನೆಯಲ್ಲಿ ಸಹಿ ಮಾಡಲಾಗಿದೆ ಎಂದು ನಮೂದು ಮಾಡಲಾಗಿದೆ ಎಂದರೆ ಹೌದು ಎಂದು ನುಡಿಯುತ್ತಾರೆ. ವಾದಿಯರ ಕಡೆಯಿಂದ ನೇರವಾಗಿ ಕ್ರಯಪತ್ರವನ್ನು ಮಾಡಿಕೊಳ್ಳಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ವಾದಿಯರಿಗೆ ತೊಂದರೆ ಇತ್ತು, ನನಗೆ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿಯರಿಗೆ ಯಾವ ತೊಂದರೆ ಇತ್ತು ಎಂದರೆ ಸಾಕ್ಷಿಯು ಕಾರವಾರಕ್ಕೆ ಬರಲು ಆಗುವುದಿಲ್ಲ, ನೀವೇ ಮಾಡಿಸಿಕೊಳ್ಳಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರ ಆಯಿತು ಎಂದು ಹೇಳುವ ಜಮೀನಿನ ಸರ್ವೆ ನಂಬರುಗಳ ಪಹಣಿ

ಪತ್ರಿಕೆಗಳನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಪಡೆದುಕೊಂಡಿರುವುದಿಲ್ಲ, ಅವರೇ ತಂದಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿರುತ್ತೀರಾ ಅಥವಾ ಇಲ್ಲವಾ ಎಂದರೆ ನಾನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು, ವಾದಿಯರೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಕರಾರು ಪತ್ರ ಆಯಿತು ಎನ್ನುವ ದಿನದಂದು ಪಹಣಿ ಪತ್ರಿಕೆಯನ್ನು ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿ ಕರಾರು ಪತ್ರವನ್ನು ಮಾಡಿಸಿರುತ್ತೀರಾ ಅಥವಾ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡದೇ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಮಾಡಿರುವುದಿಲ್ಲ, ಅವರೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ನಮೂದಿಸಿದ ಸರ್ವೆ ನಂಬರುಗಳ ಪಹಣಿ ಪತ್ರಿಕೆಗಳಲ್ಲಿ ವಾದಿಯರ ಹೆಸರು ಇತ್ತಾ ಅಥವಾ ಇಲ್ಲವಾ ಎಂದು ಪರಿಶೀಲನೆ ಮಾಡಿ ದುಡ್ಡನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯ ನಾನು ಮಾಡಿರುವುದಿಲ್ಲ, ನನ್ನ ತಂದೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

4. ನೀವು ಸಹಿ ಮಾಡಿರುತ್ತೇನೆ ಎಂದು ಹೇಳುವ ಸಂದರ್ಭದಲ್ಲಾದರೂ ಪಹಣಿ ಪತ್ರಿಕೆಯನ್ನು ನೋಡಿಕೊಂಡು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಎಸ್ ಹೆಚ್ ನಾಯಕ ಇವರು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಂಕೋಲಾ ಹಾಗೂ ವಂದಿಗೆ ಗ್ರಾಮ ಬೇರೆ ಬೇರೆ ಎಂದರೆ ಸರಿ. ನೀವು ಸಹಿ ಮಾಡಿರುತ್ತೇನೆ ಎಂದು ಹೇಳುವ ಕಾಗದ ಪತ್ರದಲ್ಲಿ ಎಲ್ಲಿ ಸಹಿ ಮಾಡಿರುತ್ತೇನೆ ಎಂದು ನಮೂದು ಮಾಡಿರುತ್ತಾರಾ ಎಂದರೆ ಸಾಕ್ಷಿಯು ವಂದಿಗೆಯಲ್ಲಿ ಸಹಿ ಮಾಡಲಾಗಿದೆ

ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಕರಾರು ಪತ್ರವನ್ನು ಮಾಡಿಸಿಕೊಂಡ ನಂತರ ಕ್ರಯ ಪತ್ರವನ್ನು ಮಾಡಿಕೊಡಿ ಎಂದು ವಾದಿಯರಿಗೆ ಏನಾದರೂ ನೋಟೀಸು ವಗೈರೆ ಕೊಟ್ಟಿರುತ್ತೀರಾ ಎಂದರೆ ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಆಗಿದೆ ಎನ್ನಲಾದ ಕ್ರಯಪತ್ರಗಳು ಅಂಕೋಲಾದಲ್ಲಿ ಆಗಿವೆಯಾ ಅಥವಾ ಕಾರವಾರದಲ್ಲಿ ಆಗಿವೆಯಾ ಎಂದರೆ ಸಾಕ್ಷಿಯು ಕಾರವಾರದಲ್ಲಿ ಎಂದು ನುಡಿಯುತ್ತಾರೆ. 3 ಕ್ರಯ ಪತ್ರಗಳನ್ನು ಬೇರೆ ಬೇರೆಯಾಗಿ ಮಾಡಿಕೊಳ್ಳಲು ಯಾವ ಕಾರಣ ಎಂದರೆ ಗೊತ್ತಿರುವುದಿಲ್ಲ. ನೀವು ಹಾಗೂ ನಿಮ್ಮತಂದೆಯವರು ಸೇರಿಕೊಂಡು ಎಲ್ಲ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ವಾದಿಯರಿಗೆ ಮೋಸ ಮಾಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರ ತಂದೆಯ ಹೆಸರಿಗೆ ಆಸ್ತಿ ಇರಬೇಕಾದರೆ ಅವರ ಹೆಣ್ಣು ಮಕ್ಕಳಾದ ವಾದಿಯರ ಹೆಸರಿಗೆ ವಾರಸಾ ಮಾಡಿಸಿಕೊಡುತ್ತೇವೆ ಎಂದು ನೀವು ಮತ್ತು ನಿಮ್ಮ ತಂದೆ ಮೋಸ ಮಾಡಿ ಈ ರೀತಿ ಕರಾರು ಪತ್ರ ಮಾಡಿಸಿಕೊಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರ ತಿಳುವಳಿಕೆಗೆ ಬಾರದಂತೆ ದಿಃ07-08-2015, ದಿಃ 12-04-2016 ಮತ್ತು ದಿಃ07-03-2017 ರಂದು ಪ್ರಪ್ರತ್ಯೇಕವಾಗಿ ಕ್ರಯಪತ್ರಗಳನ್ನು ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ವಾದಿಯರ ತಿಳುವಳಿಕೆಗೆ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಒಂದೇ ಕರಾರು ಪತ್ರವನ್ನು ಮಾಡಿಕೊಂಡು, ಆದರೆ ಕ್ರಯಪತ್ರಗಳನ್ನು ಮಾತ್ರ 3 ಯಾಕೆ ಬೇರೆ ಬೇರೆ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ವಾದಿಯರೇ ತಡ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಕಾರಣದಿಂದ ವಾದಿಯರು ತಡ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

*ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.*

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.